ಹಣವನ್ನು ತಿಂದು ಹಾಕಿದ್ದಾರೆ. ಇದರ ಬಗ್ಗೆ ಏನು ಕ್ರಮ ತೆಗೆದುಕೊಳ್ಳುತ್ತೀರಾ? ಇದರ ಬಗ್ಗೆ ಎನ್‌ಕ್ವೈರಿ ಮಾಡಿಸುತ್ತೀರಾ?

ಶ್ರೀ ಹಾರನಹಳ್ಳಿ ರಾಮಸ್ವಾಮಿ: ಏನಾದರೂ ಈ ವಿಷಯದಲ್ಲಿ ತೊಡಕು ಇದ್ದರೆ ಡೆಪ್ಯೂಟಿ ಕಮೀಷನರವರಿಗೆ ಸೂಚನೆ ಕೊಟ್ಟು ತಕ್ಷಣ ಈ ಕ್ಷೇತ್ರದಲ್ಲಿ ಏನು ತೊಂದರೆಯಿಂದ, ಅದನ್ನು ಪರಿಶೀಲನೆ ಮಾಡಿ ಅಲ್ಲಿಯೇ ಬಗೆಹರಿಸಲು ತಿಳಿಸುತ್ತೇವೆ. ಇಲ್ಲದಿದ್ದರೆ ಸರ್ಕಾರಕ್ಕೆ ವರದಿ ಕೊಡಿ ಎಂದು ಕೇಳುತ್ತೇನೆ.

ಕೃಷ್ಣ ಕಾವೇರಿ ಯೋಜನೆಯ ಅನುಷ್ಠಾನ

5 - ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ): ಮಾನ್ಯ ಉಪಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಕೃಷ್ಣ ಕಾವೇರಿ ಯೋಜನೆಗಳನ್ನು ಕಾರ್ಯಗತಗೊಳಿಸಲು ಇದುವರೆವಿಗೆ ಸರ್ಕಾರ ಬಿಡುಗಡೆಮಾಡಿರುವ ಹಣವೆಷ್ಟು?*

ಆ) *ಈ ವರ್ಷದ ಆಯವ್ಯಯದಲ್ಲಿ ಕೃಷ್ಣಾ ಕಾವೇರಿ ಯೋಜನೆಗೆ ಒದಗಿಸಲು ಉದ್ದೇಶಿಸಿರುವ ಹಣದ ಮೊತ್ತವೆಷ್ಟು?*

ಇ) *ಕೃಷ್ಣ ಯೋಜನೆಯನ್ನು ಎರಡು ಸಾವಿರ ವರ್ಷದೊಳಗೆ ಮುಗಿಸಲು ಸರ್ಕಾರದವರು ಕೈಗೊಂಡಿರುವ ಯೋಜನೆಗಳ ವಿವರಗಳೇನು?*

ಶ್ರೀ ಎಸ್.ಎಂ. ಕೃಷ್ಣ (ಉಪಮುಖ್ಯಮಂತ್ರಿಗಳು):

ಅ) 1993 ಡಿಸೆಂಬರ್ ಅಂತ್ಯದವರೆಗೆ ಕೃಷ್ಣ ಕೊಳದ ಭಾರಿ ಮತ್ತು ಮಧ್ಯಮ ನೀರಾವರಿ ಯೋಜನೆಗಳ ಮೇಲೆ 2107 ಕೋಟಿ ರೂಗಳನ್ನು ಮತ್ತು ಕಾವೇರಿ ಕೊಳ್ಳದ ಭಾರಿ ಮತ್ತು ಮಧ್ಯಮ ನೀರಾವರಿ ಯೋಜನೆಗಳ ಮೇಲೆ 1305 ಕೋಟಿ ರೂಗಳನ್ನು ವೆಚ್ಚ ಮಾಡಲಾಗಿದೆ.

ಆ) 1993-94ನೇ ಆಯವ್ಯಯದಲ್ಲಿ ಕೃಷ್ಣ ಕೊಳ್ಳದ ಭಾರಿ ಮತ್ತು ಮಧ್ಯಮ ನೀರಾವರಿ ಯೋಜನೆಗಳಿಗೆ 406.19 ಕೋಟಿ ರೂ.ಗಳ ಮತ್ತು ಕಾವೇರಿ ಕೊಳ್ಳದ ಭಾರಿ ಮತ್ತು ಮಧ್ಯಮ ನೀರಾವರಿ ಯೋಜನೆಗಳಿಗೆ 278.11 ಕೋಟಿ ರೂ.ಗಳ ಅನುದಾನವನ್ನು ನಿಗದಿಗೊಳಿಸಲಾಗಿದೆ.

ಇ) ಕೃಷ್ಣ ಕೊಳ್ಳದಲ್ಲಿ ಪ್ರಸ್ತುತ ನಿರ್ಮಾಣ ಹಂತದಲ್ಲಿರುವ ಹಾಗೂ ಇನ್ನೂ ಕೈಗೊಳ್ಳಬೇಕಾಗಿರುವ ಎಲ್ಲ ನೀರಾವರಿ ಯೋಜನೆಗಳನ್ನು ಕ್ರಿ.ಶ. 2000 ಇಸವಿ ಒಳಗೆ ಪೂರ್ಣಗೊಳಿಸಲು ಸಮಗ್ರ ಯೋಜನೆಯನ್ನು ತಯಾರಿಸಲಾಗಿದ್ದು ಇದಕ್ಕೆ ಅನುಗುಣವಾಗಿ ಆರ್ಥಿಕ ಮತ್ತು ಭೌತಿಕ ಕಾರ್ಯಕ್ರಮಗಳನ್ನು ರೂಪಿಸಿ ಅದರ ಅನುಸಾರ ಈ ಎಲ್ಲ ಯೋಜನೆಗಳನ್ನು ಪೂರ್ಣಗೊಳಿಸಲಾಗುವುದು.

12.15 ಪಿ.ಎಂ

ಶ್ರೀ ವಾಟಾಳ್ ನಾಗರಾಜ್: ಮಾನ್ಯ ಅಧ್ಯಕ್ಷರೇ, ಮಾನ್ಯ ಉಪಮುಖ್ಯಮಂತ್ರಿಗಳು ಈ ಎರಡೂ ಯೋಜನೆಗಳಿಗಾಗಿ ಇದುವರೆಗೂ 3,412 ಕೋಟಿ ರೂಪಾಯಿಗಳನ್ನು ವೆಚ್ಚ ಮಾಡಲಾಗಿದೆ ಎಂದು ಹೇಳಿದ್ದಾರೆ. ಇದರಲ್ಲಿ ಪಾವತಿಯಾಗಿರತಕ್ಕ ಹಣ ಎಷ್ಟು? ಬಾಕಿ ಉಳಿದಿರತಕ್ಕ ಹಣ ಎಷ್ಟು? ಎರಡು ಸಾವಿರ ಇಸವಿಯೊಳಗೆ ಈ ಯೋಜನೆಗಳನ್ನು ಪೂರ್ಣಗೊಳಿಸಲು ಸಮಗ್ರವಾದ ಯೋಜನೆ ತಯಾರಾಗಿದೆ ಎಂದು ಹೇಳಿದ್ದೀರಿ. ಅದಕ್ಕೆ ಅನುಗುಣವಾಗಿ ಆರ್ಥಿಕವಾಗಿ, ಭೌತಿಕವಾಗಿ ಯೋಜನೆಗಳ ವಿವರ ಏನು? ಕೃಷ್ಣ ಬಗ್ಗೆ ಸರ್ವ ವಿರೋಧ ಪಕ್ಷಗಳ ಸಭೆಯನ್ನು ಕರೆಯುತ್ತೇವೆ ಎಂದು ಹೇಳಿ ವಿಳೆಂಟು ತಿಂಗಳು ಆಯಿತು; ಇದುವರೆಗೂ ಕರೆಯಲಿಲ್ಲ? ಕೃಷ್ಣ ಕಾವೇರಿ ಕಣ್ಣೀರಿನ ಕಥೆಯನ್ನು ನೀವು ಕೊಟ್ಟಿರತಕ್ಕಂತ ಉತ್ತರವನ್ನು ನೋಡಿದರೆ ಬಗೆಹರಿಸುತ್ತೀರಿ ಎಂದು ನನಗಂತೂ ಅನ್ನಿಸುವುದಿಲ್ಲ. ಇದರ ಬಗ್ಗೆ ವಿಶೇಷವಾದಂಥ

ಚರ್ಚೆಗೆ ಒಂದು ಸಮಗ್ರವಾದ ಅವಕಾಶವನ್ನು ಕೊಡಬೇಕೆಂದು ನಾನು ತಮ್ಮ ಮುಂದೆ ಮೊರೆ ಹೋಗುತ್ತೇನೆ. ಇದರ ಕಣ್ಣೀರಿನ ಕತೆಯನ್ನು ಆ ಕೃಷ್ಣ ಪರಮಾತ್ಮನೇ ಕಾಪಾಡಬೇಕು; ಎರಡು ಮೂರು ಪ್ರಶ್ನೆ ಕೇಳುವುದರಿಂದ ಅದಕ್ಕೆ ಉತ್ತರ ಕೊಡುವುದರಿಂದ ಈ ಸಮಸ್ಯೆ ಬಗೆಹರಿಯುವುದಿಲ್ಲ, ಕೊನೆಯದಾಗಿ ಕೇಂದ್ರದ ಜಲಸಂಪನ್ಮೂಲ ಸಚಿವರಿಗೂ ನಿಮಗೂ ನಡೆದಿರತಕ್ಕಂತ ಪತ್ರವ್ಯವಹಾರಗಳು ಏನು ಅದನ್ನು ಸಭೆಯ ಮುಂದಿಡಬೇಕೆಂದು ಕೇಳುತ್ತೇನೆ.

ಶ್ರೀ ಎಸ್.ಎಂ. ಕೃಷ್ಣ: ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಬಹಳ ಪ್ರಾಮುಖ್ಯವಾದಂಥ ಪ್ರಶ್ನೆಗಳನ್ನು ಸದನದ ಮುಂದಿಟ್ಟಿದ್ದಾರೆ. ಕೃಷ್ಣ ಮತ್ತು ಕಾವೇರಿ ಈ ಎರಡೂ ಜಲಾನಯನ ಪ್ರದೇಶದಲ್ಲಿ ನಾವು ಇದುವರೆಗೂ ಎಷ್ಟು ಹಣವನ್ನು ಖರ್ಚು ಮಾಡಿದ್ದೇನೆ ಮತ್ತು ಎಷ್ಟು ಭೂಮಿಯನ್ನು ಇದರಲ್ಲಿ ನೀರಾವರಿ ಪ್ರದೇಶವನ್ನಾಗಿ ಮಾರ್ಪಾಡು ಮಾಡಿದ್ದೇವೆ ಎನ್ನುವುದರ ಬಗ್ಗೆ ಸ್ಥೂಲವಾದಂತ ವಿವರಗಳನ್ನು ಕೊಟ್ಟಿದ್ದೇನೆ. ಮಾನ್ಯ ಸದಸ್ಯರು ಏನು ತಮ್ಮಲ್ಲಿ ಮೊರೆ ಇಟ್ಟರು ಇದು ಬಹಳ ಪ್ರಾಮುಖ್ಯವಾದಂತ ವಿಚಾರ. ಈ ವಿಚಾರವನ್ನು ಕೇವಲ ಪ್ರಶ್ನೋತ್ತರ ಕಾಲದಲ್ಲಿ ನಾವು ತೀರ್ಮಾನ ಮಾಡಲಿಕ್ಕೆ ಸಾಧ್ಯವಾಗುವುದಿಲ್ಲ. ಆದುದರಿಂದ ಒಂದು ವಿಶೇಷವಾದಂತ ಚರ್ಚೆಗೆ ತಾವು ಅವಕಾಶ ಮಾಡಿಕೊಡುವುದಾದರೆ ಇದರ ಮೇಲೆ ಹೆಚ್ಚಿನ ಬೆಳಕು ಚೆಲ್ಲಬಹುದು ಅರ್ಥಪೂರ್ಣ ಚರ್ಚೆಯನ್ನು ನಡೆಸಬಹುದು ಎನ್ನುವುದರ ಬಗ್ಗೆ ಕೂಡ ಧ್ವನಿಗೂಡಿಸುತ್ತೇನೆ.

ಶ್ರೀ ವಾಟಾಳ್ ನಾಗರಾಜ್: ಅರ್ಧಗಂಟೆ ಚರ್ಚೆ ಆದರೆ ಸಾಲದು, ಕೃಷ್ಣ ಕಾವೇರಿ ಬಗ್ಗೆ ವಿಶೇಷವಾದಂಥ ಚರ್ಚೆಗೆ ಅವಕಾಶ ಕೊಡಬೇಕು. 18ನೇ ತಾರೀಖು ಸದನ ಮುಂದೆ ಹೋಗಬಹುದು, ಅಷ್ಟರೊಳಗೆ ಯಾವುದಾದರೂ ಒಂದು ದಿನ ನಿಗಧಿ ಮಾಡಿ ಆಳವಾದ ಚರ್ಚೆಗೆ ಅವಕಾಶ ಕೊಡಬೇಕು. ಸರ್ಕಾರದಿಂದ ಅನೇಕ ಉತ್ತರಗಳನ್ನು ನಾವು ನಿರೀಕ್ಷೆ ಮಾಡಬೇಕಾಗಿದೆ. ಕೇಂದ್ರ ಸರ್ಕಾರದೊಂದಿಗೆ ನಡೆದಿರತಕ್ಕ ಪತ್ರ ವ್ಯವಹಾರ,ಜಲಸಂಪನ್ಮೂಲ ಸಚಿವರೊಂದಿಗೆ ನಡೆದಿರತಕ್ಕ ಪತ್ರ ವ್ಯವಹಾರ, ನ್ಯಾಯಮಂಡಳಿಯಲ್ಲಿ ಏನೇನೂ ನಡೆದಿದೆ ಅದರ ಬಗ್ಗೆ ಸಾಕಷ್ಟು ಬೆಳಕನ್ನು ಚೆಲ್ಲಬೇಕಾಗಿದೆ....

ಅಧ್ಯಕ್ಷರು: ವಿಶೇಷವಾದಂಥ ಸಮಯವನ್ನು ನಿಗಧಿ ಪಡಿಸುತ್ತೇನೆ.

ಶ್ರೀ ವೈ.ಕೆ. ರಾಮಯ್ಯ: ಸ್ವಾಮಿ, 18ನೇ ತಾರೀಖು ಸಭೆ ಮುಗಿಯುತ್ತದೆ. ರಾಜ್ಯದ ಆರ್ಥಿಕ ಪರಿಸ್ಥಿತಿ ಬಗ್ಗೆ ಚರ್ಚೆ ಮಾಡಲಿಕ್ಕೆ ಕೊಟ್ಟಂಥ ಕಾರ್ಯಕ್ರಮದ ಪಟ್ಟಿ ಪ್ರತಿದಿನ ಪ್ರಿಂಟಾಗಿ ಬರುತ್ತಿತ್ತು. ಆದರೆ ಚರ್ಚೆ ಮಾಡುವುದಕ್ಕೆ ಆಗಲಿಲ್ಲ. ಕೃಷ್ಣ ಕಾವೇರಿ ಕಣ್ಣೀರಿನ ಕತೆ ಹಾಗೆ ಆಗುವುದು ಸರಿಯಲ್ಲ. ನಿರ್ದಿಷ್ಟವಾದ ದಿನವನ್ನು ತಾವು ಹೇಳಬೇಕಾಗುತ್ತದೆ.

ಅಧ್ಯಕ್ಷರು: ಎರಡು ಮೂರು ದಿನ ಕಾರ್ಯಕ್ರಮ ಇದೆ. ಅದನ್ನು ನೋಡಿ ನಾನು ತಮಗೆ ತಿಳಿಸುತ್ತೇನೆ.

ಶ್ರೀ ವಾಟಾಳ್ ನಾಗರಾಜ್: ನಮಗೆ ತಿಳಿಸುತ್ತೀರಾ?

ಅಧ್ಯಕ್ಷರು: ಹೌದು ತಿಳಿಸುತ್ತೇವೆ;

ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಹಾರನಹಳ್ಳಿ ರಾಮಸ್ವಾಮಿ: ಮಾನ್ಯ ಅಧ್ಯಕ್ಷರೇ, ದಿನಾಂಕ 14-2-94ರ ಲಿಖಿತ ಮೂಲಕ ಉತ್ತರಿಸುವ 5ನೇ ಪಟ್ಟಿಯಲ್ಲಿರುವ 40 ಪ್ರಶ್ನೆಗಳ ಪೈಕಿ ಪ್ರಶ್ನೆಗಳ ಸಂಖ್ಯೆ 308,200, 232, 185, 184 , 203, 334 ಪ್ರಶ್ನೆಗಳನ್ನು ಹೊರತುಪಡಿಸಿ ಇನ್ನು 33ಚುಕ್ಕೆ ಗುರುತು ಇಲ್ಲದ ಪ್ರಶ್ನೆಗಳಿಗೆ ಉತ್ತರಗಳನ್ನು ಸಭೆಯ ಮುಂದೆ ಮಂಡಿಸುತ್ತಿದ್ದೇನೆ.